ಸಾಕ್ಷಿಯನ್ನು ದಿನಾಂಕ 24.09.2024ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಸ್.ಎನ್.ಎನ್.ವಕೀಲರಿಂದಃ**

ನಾನು ನಿವೃತ್ತ ಶಿಕ್ಷಕರಿರುತ್ತೇನೆ. ನಾನು ದಿನಾಂಕ 30.06.2020 ರಂದು ನಿವೃತ್ತಿ ಹೊಂದಿರುತ್ತೇನೆ. ದಾವಾ ಸ್ವತ್ತನ್ನು ಕ್ರಯ ಪತ್ರ ಮಾಡಿಕೊಂಡುವಂತೆ ಕೋರಿ ದಾವೆ ದಾಖಲು ಪಡಿಸಿರುತ್ತೇನೆ. ಕ್ರಯದ ಒಪ್ಪಂದ ಕರಾರು ಪತ್ರವನ್ನು ಮಾಡುವ ಎರಡು ದಿನದ ಪೂರ್ವದಲ್ಲಿ ಮಾತುಕತೆಯಾಗಿರುತ್ತದೆ. ಕ್ರಯದ ಒಪ್ಪಂದ ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಮಾತ್ರ ನೋಡಿರುತ್ತೇನೆ. ನಮ್ಮ ಜಮೀನು ಮತ್ತು ದಾವಾ ಸ್ವತ್ತು ಅಕ್ಕ ಪಕ್ಕ ಇರುತ್ತವೆ. ಪ್ರತಿವಾದಿಯರ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಪ್ರತಿವಾದಿಯರು ದಾವಾ ಸ್ವತ್ತನ್ನು ಮಾರಾಟ ಮಾಡುತ್ತೇವೆ ಎಂದು ನಮ್ಮ ಮನೆಗೆ ಬಂದು ಹೇಳಿರುತ್ತಾರೆ . ಆ ಸಮಯದಲ್ಲಿ ರಾಜಶೇಖರ ಮತ್ತು ರಂಗನಾಯಕ ಎಂಬುವವರು ಹಾಜರಿದ್ದರು. ದಾವಾ ಸ್ವತ್ತು ವಿಭಾಗ ಆಗಿದೇಯೊ ಇಲ್ಲವೊ ಎಂಬ ಬಗ್ಗೆ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿಯೂ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಯರ ಹೆಸರು ಮಾತ್ರ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ನಾನು ಪಹಣಿ ಪತ್ರಿಕೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ವಿಭಾಗ ಆಗಿರುವುದರ ಬಗ್ಗೆ ಪರಿಶೀಲಸಿರುವುದಿಲ್ಲ. ಸಿದ್ದರಾಮಪ್ಪರವರ ಸಹೋದರರು ಗೊತ್ತು ಆದರೆ ಅವರ ಸಹೋದರಿಯರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಿದ್ದರಾಮಪ್ಪರವರ ಸಹೋದರಿ ಬಸಮ್ಮ ಎಂಬುವವರು ಅವರ ಸಹೋದರರಿಗೆ ಹಿಸ್ಸೆ ನೀಡುವಂತೆ ಕೋರಿ ದಿನಾಂಕ 04.09.2021ರಂದು ನೋಟಿಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಅವರಿಗೆ ನೊಟೀಸ್ ನೀಡಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಿನಾಂಕ 10.07.2020 ರಂದು ಹೆಚ್.ವಿ.ರವಿಕಾಂತ ವಕೀಲರ ಕಚೇರಿಯಲ್ಲಿ ಕರಾರು ಪತ್ರವನ್ನು ಮಾಡಿಸಲಾಗಿರುತ್ತದೆ. ಕರಾರು ಪತ್ರ ಮಾಡುವ ಕಾಲಕ್ಕೆ ಪ್ರತಿವಾದಿಯರು ಹಾಗೂ ರಂಗನಾಯಕ ಮತ್ತು ಗುರುಸ್ವಾಮಪ್ಪ ಸಹ ಹಾಜರಿದ್ದರು. 3ನೇ ಪ್ರತಿವಾದಿ ಕರಾರು ಪತ್ರಕ್ಕೆ ಕಾಗದ ತಂದಿರುತ್ತಾರೆ. ಬೆಳಿಗ್ಗೆ 10.00 ಗಂಟೆಗೆ ವಕೀಲರ ಕಚೇರಿಗೆ ಹೋರಿದ್ದು, ಎಲ್ಲಾ ಕೆಲಸ ಮುಗಿದಾಗ 11.30 ರಿಂದ 12.00 ಗಂಟೆಯಾಗಿರುತ್ತದೆ. ನಿಪಿ-1 ಕರಾರು ಪತ್ರಕ್ಕೆ ಸಹಿ ಮಾಡುವ ಕಾಲಕ್ಕೆ ಯಾವುದೇ ರಿಜಿಸ್ಟರ್ ಗೆ ಸಹಿ ಮಾಡಿರುವುದಿಲ್ಲ. ದಾವಾ ಸ್ವತ್ತಿಗೆ ಒಟ್ಟು ರೂ.9,50,000/-ಕ್ಕೆ ಕ್ರಯದ ಕರಾರು ಪತ್ರ ಆಗಿರುತ್ತದೆ. ದಿನಾಂಕ 10.07.2020ರಂದು ಚೆಕ್ ನ್ನು ರೂ.4,00,000/-ಕ್ಕೆ ನೀಡಿರುತ್ತೇನೆ. ನಗದಾಗಿ ಯಾವುದೇ ಹಣವನ್ನು ಪ್ರತಿವಾದಿಯರಿಗೆ ನೀಡಿರುವುದಿಲ್ಲ. ನಿಪಿ-1ರ ಮೇಲೆ ಸಿಸ್ ಪೆನ್ಸಿಲ್ ನಿಂದ 1,2,3 ಎಂದು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1ರಲ್ಲಿ 3ನೇ ಪುಟದ ಹಿಂದಗಡೆಯಲ್ಲಿ ಖಾಲಿ ಜಾಗೆ ಇದ್ದರು ಸಹ ಅಲ್ಲಿ ಏನನ್ನು ಬರೆಯದೇ ಮುಂದಿನ ಪೇಜ್ ನ್ನು ಯಾಕೆ ಉಪಯೋಗಿಸಿರುತ್ತೀರೆಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯರು ನನ್ನಿಂದ ರೂ.5,00,000/- ಗಳನ್ನು ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಪೈಕಿ ರೂ.4,00,000/-ಗಳನ್ನು ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇನ್ನೂ

ಉಳಿದ 1,00,000/- ರೂಪಾಯಿಗಳಿಗೆ ಬಡ್ಡಿ ಹಣವನ್ನು ಕಟ್ಟುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ಸಾಲ ನೀಡುವ ಕಾಲಕ್ಕೆ ಖಾಲಿ ಪೇಪರ್ ಗೆ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಸಹ ನಮ್ಮ ಜೊತೆಗೆ ವಕೀಲರ ಕಚೇರಿಗೆ ಬಂದಿದ್ದರು. ನಿಪಿ-1ರ ಕೊನೆಯ ಪುಟದಲ್ಲಿ 3ನೇ ಪ್ರತಿವಾದಿಯು ಬರೆದಿರುತ್ತಾರೆ. ನಿಪಿ-1ರ ಕೊನೆಯ ಪುಟದಲ್ಲಿ 762930 ರ ಚೆಕ್ ಮುಖಾಂತರ 4,00,000/-(ಒಂದು ಲಕ್ಷ) ರೂಗಳನ್ನು ದಿನಾಂಕ 30.11.2020ರಂದು ಪಡೆದಿರುತ್ತೇನೆ ಎಂದು ಬರೆಯಲಾಗಿದ್ದು, ಅದರ ಪ್ರಕಾರ ರೂ. 4,00,000/-ಗಳನ್ನು 30.11.2020ರಂದು ಪಡೆದಿರುತ್ತೇನೆ ಎಂಬ ಬಗ್ಗೆ ಅರ್ಥವಾಗುತ್ತದೆ ಎಂದರೆ ಸಾಕ್ಷಿಯೂ ದಿನಾಂಕ 30.11.2020 ರಂದು ರೂ.1,00,000/- ಮಾತ್ರ ನೀಡಿದ್ದು, 3ನೇ ಪ್ರತಿವಾದಿ ಆ ರೀತಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1ರ ಕೊನೆಯ ಪುಟದಲ್ಲಿ ಬರೆದಿರುವ ವಿಷಯ ತಪ್ಪಾಗಿರುವುದಿಲ್ಲ. ದಿನಾಂಕ 30.11.2020ರಂದು ನಮ್ಮ ಮನೆಯಲ್ಲಿ ರೂ 1,00,000/-ಗಳನ್ನು 3ನೇ ಪ್ರತಿವಾದಿ ಪಡೆದಿರುತ್ತಾರೆ. 3ನೇ ಪ್ರತಿವಾದಿ ರೂ. 1,00,000/- ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. 2ನೇ ಕರಾರು ಪತ್ರ ಮಾಡುವ ಕಾಲಕ್ಕೆ ರಂಗನಾಯಕ ಹಾಜರಿದ್ದರು. 2ನೇ ಕರಾರು ಪತ್ರವನ್ನು ಸಹ ಹೆಚ್.ವಿ ರವಿಕಾಂತ್ ವಕೀಲರ ಕಚೇರಿಯಲ್ಲಿ ಮಾಡಿಸಲಾಗಿರುತ್ತದೆ. 2ನೇ ಕರಾರು ಪತ್ರದಲ್ಲಿ ಸಹ ಸಿಸ್ ಪೆನ್ಸಿಲ್ ನಿಂದ 1,2,3 ಎಂದು ಯಾರೂ ಬರೆದಿರುತ್ತಾರೆ ಎಂದು ಗೊತ್ತಿಲ್ಲ, ವಕೀಲರು ಬರೆದಿರಬಹುದು ಎಂದು ನುಡಿಯುತ್ತಾರೆ. ನಿಪಿ-2ರ ಕ್ರಯದ ಕರಾರು ಬಾಬ್ತು ಹೆಚ್ಚುವರಿ ಕಾಲಾವಕಾಶ ಬಾಬ್ತು ಪತ್ರಕ್ಕೆ ಪ್ರತಿ ಪೇಜ್ ಗೂ ನಾನು ಸಹಿ ಮಾಡಿರುತ್ತೇನೊ ಇಲ್ಲವೊ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ-2ರಲ್ಲಿ 4ನೇ ಪುಟದಲ್ಲಿ ಮಾತ್ರ ನನ್ನ ಸಹಿ ಇದ್ದು ಇತರೆ ಪುಟಗಳಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ಎಲ್ಲಾ ಪೇಜ್ ಗಳಿಗೂ ಸಹಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2ರಲ್ಲಿ ಬರೆದು ಕೊಟ್ಟವರು ಮತ್ತು ಬರೆಹಿಸಿಕೊಂಡವರು ಎರಡು ಕಡೆಗಳಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿವೂ ನಜರ್ ಚುಕಿಯಿಂದ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2ರಲ್ಲಿ ಸಾಕ್ಷಿದಾರರ ಸಹಿಯನ್ನು ಹೊರತುಪಡಿಸಿ ಅವರ ಸಂಪೂರ್ಣ ವಿಳಾಸವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರೂ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕರಾರು ಪತ್ರವನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಾಲ ನೀಡುವ ಕಾಲಕ್ಕೆ ಬಧ್ರತೆಗಾಗಿ ಪ್ರತಿವಾದಿಯರ ಸಹಿಗಳನ್ನು ಕಾಲಿ ಹಾಳೆಯ ಮೇಲೆ ಪಡೆದು, ಅದನ್ನು ಈಗ ಕ್ರಯ ಕರಾರು ಪತ್ರವಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರೂ.1,00,000/- ನೀಡುವ ಸಮಯದಲ್ಲಿ ಮುಂದುವರೆದ ಕ್ರಯದ ಕರಾರು ಪತ್ರ ಎಂದು ಮಾಡಿಕೊಳ್ಳಲು ತೊಂದರೆ ಇರಲಿಲ್ಲ. ದಿನಾಂಕ 15.02.2021ರಂದು ರೂ.4,00,000/-ಗಳನ್ನು ಪ್ರತಿವಾದಿಯರು ಸಾಕ್ಷಿದಾರರ ಸಮಕ್ಷಮ ನನಗೆ ಹಿಂದಿರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಬಾಕಿ ಉಳಿದ ರೂ.1,00,000/- ಗಳನ್ನು ಈಗಲೂ ಸಹ ನೀಡಲು ತಯಾರು ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ಪ್ರತಿವಾದಿಯ ಕುಟುಂಬಕ್ಕೆ ಬೇರೆ ಜಮೀನು ಇರುತ್ತದೆ ಆದರೆ ಎಷ್ಟು ಎಂಬ ಬಗ್ಗೆ ನನಗೆ ಗೊತ್ತಿರುವುದಿಲ. ದಾವಾ ಸ್ವತ್ತನ್ನು ಹೋರತುಪಡಿಸಿ ಪ್ರತಿವಾದಿಯರ ಕುಟುಂಬಕ್ಕೆ ಕಡಿಮೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಯರು ದಾವಾ ಸ್ವತ್ತಿನ ಆದಾಯದ ಮೇಲೆ ಅವಲಂಬಿತರಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಕ್ರಯದ ಕರಾರು ಪತ್ರವನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ವಕೀಲರ ಮುಖಾಂತರ ನೋಟಿಸ್ ಕಳುಹಿಸಿದ್ದಾಗ ಪ್ರತಿವಾದಿಯರು ನಮ್ಮ ಮನೆಗೆ ಬಂದು ಏಕೆ ಈ ರೀತಿ ನೋಟಿಸ್ ಕಳುಹಿಸಿದ್ದಿರಿ ಎಂದು ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಪ್ರತಿವಾದಿಯರಿಗೆ ಬಾಕಿ ಉಳಿದ ರೂ.1,00,000/- ಗಳನ್ನು ನನಗೆ ನೀಡಿದಲ್ಲಿ ನಾನು ಯಾವುದೇ ಪ್ರಕರಣ ದಾಖಲಿಸುವುದಿಲ್ಲ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ದಾಖಲು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತಿನ ಮೌಲ್ಯ ಎಷ್ಟು ಇದೇ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. 2020-21ನೇ ಸಾಲಿನಲ್ಲಿ ಎಕರೆಗೆ ಐದು ಲಕ್ಷ ಮೌಲ್ಯ ಇತ್ತು ಎಂದು ನುಡಿಯುತ್ತಾರೆ. ಜಮೀನುಗಳ ಬೆಲೆ ಜಾಸ್ತಿಯಾಗಿರುವುದರಿಂದ ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ದಾಖಲು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ದರದು ಇರಲಿಲ್ಲ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್

ಗುಂಡ್ಲುಪೇಟೆ